# ‘ಸಿನಿಮಾಕ್ಕೆ ಬಂದದ್ದೇ ರಾಜಕಾರಣಿ ಆಗಲು..!

## ಇದು ಉಪ್ಪಿ ಸ್ಟೈಲ್ ಪಾಲಿಟಿಕ್ಸ್

ಮಾತುಕತೆ: **ಬಿ.ಎಂ. ಹನೀಫ್**
ಚಿತ್ರ: **ಆನಂದ ಬಕ್ಷಿ**

ರಾಜಕಾರಣಿಗಳು ಜನರ ಹಾಲಿನಂತಹ ಮನಸ್ಸನ್ನು ಒಡೆದು ಅದನ್ನು ಪನ್ನೀರ್ ಮಾಡಿ, ಮೊಸರು ಮಾಡಿ, ಫ್ರಿಜ್‌ನಲ್ಲಿ ಇಟ್ಟುಬಿಟ್ಟಿದ್ದಾರೆ. let us go to the milk.

★ ***‘ಕರ್ನಾಟಕ ಪ್ರಜ್ಞಾವಂತ ಜನತಾ ಪಕ್ಷ’ ಕಟ್ಟಿದ್ದೀರಿ. ಈ ರಾಜಕೀಯದ ಐಡಿಯಾ ಹೇಗೆ ಬಂತು? ನೀವು ಈವರೆಗೆ ಯಾವುದೇ ರಾಜಕೀಯ ಚಟುವಟಿಕೆಗಳಲ್ಲಿ ಇರಲಿಲ್ಲವಲ್ಲ?***

ಇಲ್ಲ ಸಾರ್, ನಾನು ಸಿನಿಮಾಕ್ಕೆ ಬಂದದ್ದೇ ರಾಜಕೀಯಕ್ಕೋಸ್ಕರ. 17 ವರ್ಷಗಳ ಹಿಂದಿನ ನನ್ನ ವೀಡಿಯೊ ಒಂದಿದೆ ನೋಡಿ. ಮೈಸೂರು ಮತ್ತಿತರ ಕಡೆ ಓಡಾಡಿದಾಗ ಈ ವಿಷಯ ಹೇಳಿದ್ದೆ. ರಾಜಕೀಯಕ್ಕೆಂದೇ ನಾನು ಬರೆಯಲು ಶುರು ಮಾಡಿದ್ದು. ಸಿನಿಮಾ ಎಲ್ಲ ಆಗಿ ಸ್ವಲ್ಪ ಹೆಸರು ಮಾಡಿದ ಮೇಲೆ ಏನನ್ನಾದರೂ ಮಾಡಬೇಕು ಅಂತ ಆಗಲೇ ಇತ್ತು. ಆದರೆ ಆ ವಯಸ್ಸಿನಲ್ಲಿ ಏನು ಮಾಡಬೇಕು ಅನ್ನೋದು ಸರಿಯಾಗಿ ಗೊತ್ತಿರಲಿಲ್ಲ. ಒಳಗಡೆ ಕಾಡ್ತಾನೇ ಇತ್ತು. ಅದನ್ನು ನನ್ನ ಸಿನಿಮಾಗಳ ಮೂಲಕ ಸ್ವಲ್ಪ ಸ್ವಲ್ಪ ಮಾಡ್ತಾ ಇದ್ದೆ.

★ ***ಸರಿಯಾಗಿ ರಾಜಕೀಯಕ್ಕೆ ಸೇರಿ ಏನನ್ನಾದರೂ ಮಾಡಬೇಕು ಎಂದು ಅನ್ನಿಸಿದ್ದು ಯಾವಾಗ?***

ಬೆಂಗಳೂರಿನ ಎಪಿಎಸ್ ಕಾಲೇಜಿನಲ್ಲಿ ನಾನು ಕಲಿತದ್ದು. ಕಾಲೇಜಿನಲ್ಲಿ ಎಲೆಕ್ಷನ್ ನಿಲ್ಲೋದು, ಹುಡುಗರನ್ನು ಹೆದರಿಸೋದು ಎಲ್ಲ ಇತ್ತು. ಆಗಲೇ ರಾಜಕೀಯದ ವಿಚಾರ ನನ್ನಲ್ಲಿ ಕುಡಿಯೊಡೆದಿತ್ತು.

★ ***ಏಕೆ... ಸಿನಿಮಾರಂಗದ ಬಗ್ಗೆ ಏನಾದ್ರೂ ಬೇಸರ ಉಂಟಾಗಿದೆಯಾ?***

ಖಂಡಿತಾ ಇಲ್ಲ. ಆದರೆ ಸಿನಿಮಾನೇ ನನ್ನ ಮುಖ್ಯ ಗುರಿ ಎಂದಾಗಿದ್ದರೆ, ಪಕ್ಕಾ ಬಾಡಿ ಬಿಲ್ಡ್ ಮಾಡ್ಕೊಂಡು, ಡ್ಯಾನ್ಸ್ ಜಾಸ್ತಿ ಕಲಿತ್ಕೊಂಡು ಇದರಲ್ಲೇ ಪೂರ್ತಿಯಾಗಿ ತೊಡಗಿಸಿಕೊಂಡಿರ್ತಿದ್ದೆ. ಸಿನಿಮಾ ಒಂದು part ಅಂತ ನನಗೆ ಗೊತ್ತಿತ್ತು. ಇದು ರಾಜಕೀಯಕ್ಕೆ ಏಣಿ ಇದ್ದ ಹಾಗೆ. time pass ತರಹ ಮಾಡ್ಕೊಂಡಿದ್ದೆ. ನಡುನಡುವೆ ಒಂದು ಸಿನಿಮಾ direction

